# 30

# “ನಾನೇ ದ್ರಾಕ್ಷೆ ಬಳ್ಳಿ”

## (15:1-16:4)

ನೊರ್ಮನ್ ರೊಕ್‌ವೆಲ್ಲ್‌ನ ಪೇಟಿಂಗ್‌ನ ಒಂದು ಪ್ರತಿಯು ನನ್ನ ಅಭ್ಯಾಸದ ಕೋಣೆಯಲ್ಲಿರುವುದು. ಒಂದಲ್ಲಾ ಒಂದು ರೀತಿಯಲ್ಲಿ ನಾವೆಲ್ಲರೂ ಅನುಭವಿಸಿದ ಒಂದು ಕಥೆಯನ್ನು ಅದು ಹೇಳುತ್ತದೆ: ಮನೆಯನ್ನು ಬಿಟ್ಟು ಹೋಗುವ ಕಥೆಯು ಚಿತ್ರದಲ್ಲಿ, ಒಬ್ಬ ತಂದೆಯು ಯಾವುದಕ್ಕಾಗಿಯೋ, ಬಹುಶಃ ಒಂದು ಬಸ್ಸಿಗಾಗಿ ಕಾಯುತ್ತಿರುವಂತೆ ತನ್ನ ಮಗನ ಪಕ್ಕದಲ್ಲಿ ಹಳೆಯದಾದ ಫ್ಯಾಮಿಲಿ ಪಿಕ್ ಅಪ್‌ಟ್ರಕ್ಕಿನ ರನ್ನಿಂಗ್ ಬೋರ್ಡಿನ ಮೇಲೆ ಕುಳಿತು ಕೊಂಡಿರುವನು. ಮಗನು ಕಾಲೇಜಿಗೆ ಹೋಗ ಬೇಕಾಗಿತ್ತು. ತಂದೆಯು ಒಕ್ಕಲಿಗನ ಕೆಲಸದ ಬಟ್ಟೆಯನ್ನು ತೊಟ್ಟು ಕೊಂಡಿದ್ದನು. ಮಗನು ಸೂಟು ಧರಿಸಿಕೊಂಡು ಟೈ ಕಟ್ಟಿಕೊಂಡಿದ್ದನು. ತಂದೆಯು ವಯಸ್ಸಾದನಂತೆ, ದಣಿದವನಂತೆ ಮತ್ತು ಚಿಂತಿಸುವವನಂತೆ ಕಾಣುತ್ತಿದ್ದನು. ಮಗನು ಯುವಕನೂ, ಚೈತನ್ಯವುಳ್ಳವನೂ ಜಗತ್ತನು ಎದುರಿಸಲು ಸಿದ್ಧನಾದನೂ ಆದಂತೆ ಕಾಣುತ್ತಿದ್ದನು. ಚಿತ್ರದಲ್ಲಿ ದುಃಖದ ಸ್ಪರ್ಶವಾಯಿತು; ತಂದೆಗಾಗಿ ಮತ್ತು ಕುಟುಂಬದ ನಾಯಿಗಾಗಿ ಒಬ್ಬನು ದುಃಖಿಸುತ್ತಾನೆ. ಇದು “ಗುಡ್ ಬಾಯ್” ಆಗಿರುವದೆಂದು ಯಾರು ಬಲ್ಲರು. ತಂದೆಯು ಯುವಕನ ಪಾದದ ಮೇಲೆ ದುಃಖದಿಂದ ತನ್ನ ತಲೆಯನ್ನಿಟ್ಟಿರುತ್ತಾನೆ. ಕೆಲವು ಸಲ ನಾನು ಈ ಚಿತ್ರವನ್ನು ನೋಡಿದಾಗ ಯುವಕನೊಂದಿಗೆ ನನ್ನನ್ನು ಗುರುತಿಸಿಕೊಳ್ಳುತ್ತೇನೆ, ಕೆಲವು ಸಂದರ್ಭದಲ್ಲಿ, ನಾಯಿಯೊಂದಿಗೂ ಸಹ ಗುರುತಿಸಿಕೊಳ್ಳುತ್ತೇನೆ!

ರೊಕ್‌ವೆಲ್ಲನ ಪೇಂಟಿಂಗ್ ಕೇಳುವ ಒಂದು ಪ್ರಶ್ನೆಯು ಹೀಗೆ ಇರುವದೆಂದು ತೋರುತ್ತದೆ: “ತಂದೆಯು ಏನನ್ನು ಯೋಚಿಸುತ್ತಿದ್ದಾನೆ?” ಬಸ್ಸು ಬರುವಾಗ, ಇಬ್ಬರೂ ಎದ್ದು ನಿಂತು ಕೊಳ್ಳುವರು, ತಂದೆಯು, “ಈಗ ನೀನು ಜಾಗರೂಕತೆಯಿಂದ ಇರು, ನಿನಗೆ ಕೇಳಿಸುತ್ತದಲ್ಲವೇ?” ಇಲ್ಲವೇ, ಮಗನೇ, ನಿನ್ನ ತಾಯಿಗೆ ಬರೆಯುತ್ತಿರು; ಆಕೆಗೆ ಅದು ಬಹಳವಾದದ್ದಾಗಿರುತ್ತದೆ” ಎಂದು ಹೇಳುವನು ಎಂದು ನಾನು ಊಹಿಸುತ್ತೇನೆ. ಹೀಗಿದ್ದರೂ, ಅವನ ಹೃದಯದಲ್ಲಿ ಆಳವಾಗಿ ಹುದುಗಿರುವ ಭಾವನೆಗಳಲ್ಲಿ ನಾನಿರುವಂತೆ ಅವನು ಹೇಳುವ ಮಾತುಗಳಲ್ಲಿ ನಾನು ಅಷ್ಟು ಆಸಕ್ತಿಯುಳ್ಳವನಾಗಿರುವದಿಲ್ಲ ತನ್ನ ಮಗನಿಗಾಗಿ ಮುಂದೇನು ಕಾದಿರುವುದೋ ಎಂದು ಅವನು ಆಶ್ಚರ್ಯಪಡುತ್ತಿರುವನೆಂದು ನಾನು ಊಹಿಸುತ್ತೇನೆ. ಅವನು ಸಿದ್ಧನಾಗಿರುವನೋ? ಅವನಗೆ ಒಳ್ಳೆಯ ಸ್ನೇಹಿತರಿರುವರೋ? ಹೃದಯದ ನೋವನ್ನು ತಡೆದು ಕೊಳ್ಳುವದನ್ನು ಅವನು ತಿಳಿದಿರುವನೋ? ಯಶಸ್ಸಿನಿಂದ ಅವನು ಬದಲಾಗ ಬಹುದೋ? ಲೋಕದಲ್ಲಿ ಹೊರಗೆ ಇರುವಾಗ ಅವನಿಗೆ ಅಗತ್ಯವಾಗಿರುವ ಪ್ರತಿಯೊಂದನ್ನು ತಂದೆಯು ಅವನಿಗೆ ಕಲಿಸಿರುವನೋ?

ರೊಕ್‌ವೆಲ್ಲನ್ ಚಿತ್ರದಲ್ಲಿಯ ಬಸ್ ಸ್ಟಾಪಿನ ಬಳಿಯಲ್ಲಿಯ ತಂದೆ ಮತ್ತು ಮಗನ ಪ್ರತೀಕಗಳು ನಮ್ಮ ಪಾಠದ ಅಧ್ಯಯನಕ್ಕೆ ನಮ್ಮನ್ನು ಚೆನ್ನಾಗಿ ಸಿದ್ಧಮಾಡುತ್ತವೆ. ಯೋಹಾನ 13ರಿಂದ 17ರ ವರೆಗಿನ ಅಧ್ಯಾಯಗಳು ಯೇಸುವು ಶಿಲುಬೆಗಿಂತ ಮೊದಲಿನ ತನ್ನ ಅಂತಿಮ ತಾಸುಗಳಲ್ಲಿ ಇರುವದನ್ನು ದಾಖಲೆ ಮಾಡುತ್ತವೆ. 13ನೆಯ ಅಧ್ಯಾಯದಲ್ಲಿ ತನ್ನ ಶಿಷ್ಯರ ಪಾದಗಳನ್ನು ತೊಳೆದನು ಮತ್ತು 14ನೆಯ ಅಧ್ಯಾಯದಲ್ಲಿ ಆತನು ಅವರ ಭಯಗಳನ್ನು ಶಾಂತಗೊಳಿಸಿದನು. ಈ ಪಠ್ಯದಲ್ಲಿ 15:1-16:4ರಲ್ಲಿ, ಅವರನ್ನು ಎದುರಿಸಲಿಕ್ಕಿದ್ದ ತೊಂದರೆಗಾಗಿ ಆತನು ಶಿಷ್ಯರನ್ನು

ಹೇಗೆ ಸಿದ್ಧಪಡಿಸಿದನು ಎಂಬುದನ್ನು ನೋಡುತ್ತೇವೆ. ಆತನು ಇದನ್ನು, ಆತನಿಲ್ಲವೇ ಅವರು ಎದುರಿಸಬೇಕಾದ ಮೂರು ಪ್ರಮುಖ ವಿಷಯಗಳನ್ನು ನಿರೀಕ್ಷಿಸುವದರಿಂದ ಮಾಡಿದನು.

## ವಿಷಯ ಒಂದು: ಜನರಿಂದ ಹಿಂಸೆ (15:18-16:4)

ಯಾರಾದರೂ ಎಂದಾದರೂ ನಿನ್ನನ್ನು ದ್ವೇಷಿಸಿರುವರೋ ಇಲ್ಲವೇ ನಿನ್ನನ್ನು ಹಗೆ ಮಾಡಿರುವರೋ, ಆದಾಗ್ಯೂ ಯಾಕೆ ಎಂಬುದರ ಬಗ್ಗೆ ನಿನಗೆ ವಿಚಾರವಿಲ್ಲವೋ? ನನ್ನ ಒಬ್ಬ ಸಹೋದರಿಗೆ ಆಕೆಯ ಕಾಲೇಜಿನಲ್ಲಿ ಆಕೆಗೆ ಅಂಥ ಒಂದು ಅನುಭವವಾಯಿತು. ಒಬ್ಬ ವಿದ್ಯಾರ್ಥಿಯು ಆಕೆಯನ್ನು ದ್ವೇಷಿಸುತ್ತಿರುವಂತೆ ಆಕೆಯ ಕಡೆಗೆ ನೋಡುತ್ತಿರುವದನ್ನು ಆಕೆ ಗಮನಿಸಿದಳು, ಆದರೆ ಆಕೆ ಆ ವ್ಯಕ್ತಿಯನ್ನು ತಿಳಿದಿರಲೇ ಇಲ್ಲ. ಕೆಲವು ಸಲ ಅವರು ಬದಿಯ ದಾರಿಯಲ್ಲಿ ಒಬ್ಬರನೊಬ್ಬರು ದಾಟಿಹೋಗುತ್ತಿದ್ದರು ಮತ್ತು ನನ್ನ ಸಹೋದರಿ ಮುಗುಳ್ನಗೆ ನಕ್ಕು "ಹಲೋ" ಎಂದು ನಮ್ರತೆಯಿಂದ ಅವನನ್ನು ವಂದಿಸುತ್ತಿದ್ದಳು. ಹೀಗಿದ್ದರೂ ಅವನು ಗಂಟು ಮೋರೆಮಾಡಿಕೊಂಡು, ಬೇರೆ ಕಡೆಗೆ ನೋಡುತ್ತ, ಬೇಸರದಿಂದ ನಿಟ್ಟುಸಿರು ಬಿಡುತ್ತಿದ್ದನು. ಆಕೆ ತನ್ನ ಗೆಳತಿಯರಿಗೆ ಈ ವಿಚಿತ್ರವಾದ ಪರಿಸ್ಥಿತಿಯನ್ನು ಕುರಿತು ಹೇಳಿದಳು, ಆದರೆ ಇದು ಆಕೆಯ ಕಲ್ಪನೆಯಾಗಿರಬೇಕೆಂದು ಅವರು ಯೋಚಿಸಿದರು.

ಒಂದು ದಿನ ನನ್ನ ಸಹೋದರಿಯು ಇನ್ನೊಂದು ದಂಪತಿಗಳೊಂದಿಗೆ ಮತ್ತು ಅವರ ಸ್ನೇಹಿತನಾದ ಒಬ್ಬ ಯುವಕನೊಂದಿಗೆ ಹೊರಗೆ ಹೋಗಲು ಕೇಳಲ್ಪಟ್ಟಳು. ಆಕೆ ಅದನ್ನು ಸ್ವೀಕರಿಸಿದಳು. ದಿನವು ಬಂದಾಗ, ಆ ಯುವಕನು ಬೇರೆ ಯಾರೂ ಆಗಿರದೇ ಆಕೆಯನ್ನು ದ್ವೇಷಿಸುತ್ತಿದ್ದ ವ್ಯಕ್ತಿಯಾಗಿದ್ದನು. ಆ ಸಾಯಂಕಾಲವು ದುರುದೃಷ್ಟಕರವಾದದ್ದಾಗಿತ್ತು. ಅವನು ಆಕೆಯನ್ನು ದ್ವೇಷಿಸುತ್ತಿರುವನಂತೆ ಕಂಡು ಬಂದನಷ್ಟೇ ಅಲ್ಲ ಆದರೆ ಅವನು ನಿಜವಾಗಿಯೂ ಆಕೆಯನ್ನು ದ್ವೇಷಿಸಿದನು. ವಿನಯದ ಇಲ್ಲವೇ ದಯೆಯ ಒಂದು ಮಾತನ್ನು ಆಡಲಿಲ್ಲ. ಮತ್ತು ಆ ದಿನವನ್ನು ಸಂತೋಷಕರವಾದದ್ದನ್ನಾಗಿ ಮಾಡಲೂ ಪ್ರಯತ್ನಿಸಲಿಲ್ಲ. ಅದೆಲ್ಲದರಿಂದ ನನ್ನ ಸಹೋದರಿ ಗಾಬರಿಗೊಂಡಳು. ಈ ವ್ಯಕ್ತಿಯ ಮನನೋಯಿಸಲು ಆಕೆ ಏನನ್ನು ಮಾಡಿರಲಿಲ್ಲ. ಹೀಗಿದ್ದರೂ, ಅವನು ಆಕೆಯನ್ನು ಕೆಟ್ಟ ವೈರಿಯಂತೆ ನಡಿಸಿಕೊಂಡನು. ಕೆಲವು ಸಮಯದ ನಂತರ ಆಕೆಗೆ ನಿಜ ಸಂಗತಿ ತಿಳಿಯಿತು. ಅವನು ಶಾಲೆಗೆ ಹೋಗಲು ತನ್ನ ಸ್ವಂತ ಪಟ್ಟಣವನ್ನು ಬಿಟ್ಟು ಹೋಗುವ ಮೊದಲು ಆ ಪಟ್ಟಣದಲ್ಲಿ ನನ್ನ ಸಹೋದರಿಯಂತೆ ಕಾಣುತ್ತಿದ್ದ ಒಬ್ಬ ಹಳೇ ಸ್ನೇಹಿತಿಯು ಈ ಯುವಕನ ಹೃದಯವನ್ನು ಮುರಿಯುವಂತೆ ಮಾಡಿದ್ದಳು!

ನಮ್ಮ ಪಠ್ಯದಲ್ಲಿ, ಯೇಸುವು ತನ್ನ ಶಿಷ್ಯರಿಗೆ ಅವರಿಗೆ ಮುಂದೆ ಕಠಿಣವಾದ ಸಮಯಗಳು ಇರುವವು ಎಂದು ಎಚ್ಚರಿಕೆ ಕೊಟ್ಟನು. ಬೇಗನೇ ಅವರು ನನ್ನ ಸಹೋದರಿಯಂತೆಯೇ ಗಾಬರಿ ಪಟ್ಟುಕೊಳ್ಳಬೇಕಾಗುವದು! ಹಲವಾರು ವಿಧಗಳಲ್ಲಿ ಯೇಸುವು ಅವರನ್ನು ಈ ನೋವಿನ ಅನುಭವಕ್ಕಾಗಿ ಲೋಕವು ತನ್ನನ್ನು ಮೊದಲು ದ್ವೇಷಿಸಿತೆಂಬುದನ್ನು ಜ್ಞಾಪಿಸಿಕೊಳ್ಳತಕ್ಕದ್ದು (15:18). ಅವರು ಆತನ ಶಿಷ್ಯರಾಗಿರುವುದರಿಂದ, ತಾನು ಸ್ವೀಕರಿಸಿದ ನಡಿಸಿಕೊಳ್ಳುವಿಕೆಯನ್ನೇ ಸ್ವೀಕರಿಸಿಕೊಳ್ಳತಕ್ಕದ್ದು (15:20). ಲೋಕವು ಆತನ ಮಾತುಗಳಿಗೆ ಕಿವಿಗೊಟ್ಟಿದ್ದರೆ, ಅದು ಅವರ ಮಾತನ್ನು ಕೇಳುವುದು. ಹೀಗಿದ್ದರೂ, ಲೋಕವು ಆತನನ್ನು ಸಾಮಾನ್ಯವಾಗಿ ಹಿಂಸಿಸಿದ್ದದಿಂದ, ಅವರಿಗೂ ಸಹ ಅದನ್ನೇ ಮಾಡುವದನ್ನು ಅವರು ನಿರೀಕ್ಷಿಸತಕ್ಕದ್ದು.

ಲೋಕದಿಂದ ಹಿಂಸೆಯು "ವೈಯಕ್ತಿಕವಾದದ್ದು" ಆಗಿರುವದಿಲ್ಲ, ಆದರೆ ಅವರು ತನ್ನ ಹಿಂಬಾಲಕರಾಗಿರುವದರಿಂದ ಅವರಿಗೆ ಬರುವುದೆಂದು ಯೇಸು ಅವರಿಗೆ ಹೇಳಿದನು (15:21). ತನ್ನನ್ನು ಮತ್ತು ಅವರನ್ನು ದ್ವೇಷಿಸಿದವರು ತಂದೆಯನ್ನು ಸಹ ದ್ವೇಷಿಸಿದರೆಂದು ತನ್ನ ಶಿಷ್ಯರು ತಿಳಿಯಬೇಕೆಂದು ಆತನು ಬಯಸಿದ್ದನು (15:23). ಬರಲಿಕಿದ್ದ ಹಿಂಸೆಯ ಬಗ್ಗೆ ಅತಿಯಾದ ಯಾತನೆಯುಳ್ಳದ್ದು ಯಾವ ಅರ್ಥವಿಲ್ಲದ್ದಾಗಿದೆಯೆಂದು ಯೇಸುವು ತಿಳಿದಿದ್ದನು. ಅದು "ಕಾರಣವಿಲ್ಲದೇ ಇರುವಂಥದ್ದಾಗಿದೆ" ಎಂದು ಆತನು ಮುನ್ನೋಡಿದನು (15:25).

ಸಮಯಕ್ಕಿಂತ ಮೊದಲು ಇದನ್ನು ತಿಳಿಯುವುದು ಒಂದು ರೀತಿಯಲ್ಲಿ ಶಿಷ್ಯರಿಗೆ ಹೆಚ್ಚು ತಾಳಿಕೊಳ್ಳುವಂಥದ್ದಾಗಿರುವದೆಂದು ಆತನು ನಿರೀಕ್ಷಿಸಿದನು.

ಶಿಷ್ಯರು ಸಭಾಮಂದಿರಗಳಿಂದ ಹೊರಗೆ ಹಾಕಲ್ಪಡುವದನ್ನು ನಿರೀಕ್ಷಿಸಬೇಕು.[1] ಯೇಸುವು ಅವರಿಗೆ ಕೊಟ್ಟ ಎಲ್ಲಾ ಎಚ್ಚರಿಕೆಗಳಲ್ಲಿ ಅತೀ ಹೆಚ್ಚು ನೋವಿನ ಹೇಳಿಕೆಯು ಇದಾಗಿತ್ತು: "ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರತ್ತದೆ" (16:2). ಯೇಸುವು ತಾನು ಶಿಲುಬೆಗೆ ಹಾಕಲ್ಪಡುವದಕ್ಕಿಂತ ದಿನದ ಹಿಂದಿನ ಸಾಯಂಕಾಲ ಅವರಿಗೆ ಯಾಕೆ ಇಂಥ ನೋವಿನ ಸುದ್ಧಿಯನ್ನು ಕೊಟ್ಟನು? ಕಠಿಣವಾದ ಸಮಯಗಳು ಬರವಾಗ, ಅವರು ಎಡವಿಬೀಳದಂತೆ ಅವರನ್ನು ಸಿದ್ಧಪಡಿಸುವುದು ಆತನ ಉದ್ದೇಶವಾಗಿತ್ತು (16:1). ಅಂಥ ತೊಂದರೆಗಳ ಬಗ್ಗೆ ಯೇಸುವು ಅವರಿಗೆ ಎಚ್ಚರಿಕೆ ಕೊಟ್ಟಿದ್ದನು ಎಂದು ಅವರು ಜ್ಞಾಪಿಸಿಕೊಂಡರೆ, ಆಗ ಅವರು ಅಧೈರ್ಯಪಟ್ಟುಕೊಳ್ಳುವದಿಲ್ಲ (16:4). ಯೇಸುವು ಅವರನ್ನು ಪ್ರೋತ್ಸಾಹಿಸಲು ಮತ್ತು ಅವರಿಗೆ ಬೋಧಿಸಲು ಇದ್ದಾಗ, ಅವರಿಗೆ ಅಂಥ ಎಚ್ಚರಿಕೆಗಳ ಅಗತ್ಯತೆ ಇರಲಿಲ್ಲ. ಆತನು ಅವರನ್ನು ಬಿಟ್ಟು ಹೋಗಲು ಸಿದ್ಧನಾದಂತೆ, ಅವರ ಆತ್ಮಿಕ ಉಳಿದುಕೊಳ್ಳುವಿಕೆಗಾಗಿ ಈ ಬೋಧನೆಗಳು ಅಗತ್ಯವಾಗಿದ್ದವು.

ಯೇಸುವಿನ ಹಿಂಬಾಲಕರಂತೆ ನಮ್ಮ ಪರಿಸ್ಥಿತಿಗಳು ಇಂದು ಒಂದು ರೀತಿಯಲ್ಲಿ ಭಿನ್ನವಾಗಿದ್ದರೂ, ನಾವು ಅವರಂತೆ ನಾವು ಎದುರಿಸಲ್ಲಿಕ್ಕಿರುವ ತೊಂದರೆಗಳ ಬಗ್ಗೆ ಕೇಳುವ ಅಗತ್ಯತೆ ಇರುತ್ತದೆ. ಜಗತ್ತಿನಲ್ಲಿ ಇಂದು ಕೆಲವು ಸ್ಥಳಗಳಲ್ಲಿ, ಕ್ರೈಸ್ತರನ್ನು ಎದುರಿಸುತ್ತಿರುವ ವಿರೋಧವು ತೀಕ್ಷ್ಣವಾದದ್ದಾಗಿರುತ್ತದೆ. ಅವರು ಹೊಡೆಯಲ್ಪಟ್ಟಿದ್ದಾರೆ, ಸೆರೆಗೆ ಹಾಕಲ್ಪಟ್ಟಿದ್ದಾರೆ, ಅವರ ಮನೆಗಳು ಸುಡಲ್ಪಟ್ಟಿವೆ, ಇಲ್ಲವೇ ಅವರ ಸಭಾಕೂಟಗಳು ಪ್ರತಿ ಬಂಧಿಸಲ್ಪಟ್ಟಿವೆ. ಈ ಕ್ರೈಸ್ತರು ಈ ವಾಕ್ಯಭಾಗದಲ್ಲಿಯ ಯೇಸುವಿನ ಮಾತುಗಳನ್ನು ಅರ್ಥಮಾಡಿಕೊಳ್ಳಬಲ್ಲರು. ತಮ್ಮ ಶ್ರಮೆಯಿಂದ ಆಶ್ಚರ್ಯಪಡಬಾರದೆಂದು ಅವರು ತಿಳಿದು ಕೊಂಡಿದ್ದಾರೆ; ಯಾಕೆಂದರೆ ಯೇಸುವು ತಾನೇ ಮೊದಲು ಶ್ರಮೆಹೊಂದಿದನು!

ಇತರ ಕ್ರೈಸ್ತರು ಸಾಮಾಜಿಕ ಹಿಂಸೆಯನ್ನು ಎದುರಿಸುವಷ್ಟರಂತೆ ದೈಹಿಕ ಹಿಂಸೆಯನ್ನು ಎದುರಿಸಲಿಕ್ಕಿಲ್ಲ. ದೈಹಿಕವಾಗಿ ಹೊಡೆಯಲ್ಪಡದಿರುವಾಗ, ಅವರು ತಮ್ಮ ನಂಬಿಕೆಗಳ ಬಗ್ಗೆ ಅಪಹಾಸ್ಯ ಮಾಡಲ್ಪಡಬಹುದು ಮತ್ತು ಅವರ ದೃಢ ವಿಶ್ವಾಸಿಗಳ ಬಗ್ಗೆ ಹಾಸ್ಯ ಮಾಡಲ್ಪಡಬಹುದು 1992ರಲ್ಲಿ, ಚಲನ ಚಿತ್ರ ವಿಮರ್ಶಕ ಮೈಕಲ್ ಮೆಡ್‌ವೆಡ್‌ನು *Hollywood vs. America* ಎಂದು ಕರೆಯಲ್ಪಟ್ಟ ಪುಸ್ತಕವನ್ನು ಪ್ರಕಟಿಸಿದನು. ಅದರಲ್ಲಿ ಅವನು, ಚಲನ ಚಿತ್ರ ನಿರ್ಮಿಸುವ ಇಂಡಸ್ಟ್ರೀಯು ಧರ್ಮವನ್ನು ಮತ್ತು ಧಾರ್ಮಿಕ ಮೌಲ್ಯಗಳನ್ನು ಕೀಳು ಮಟ್ಟದಲ್ಲಿ ನೋಡುವ ಪ್ರತಿಯೊಂದು ಅವಕಾಶವನ್ನು ಹೇಗೆ ತೆಗೆದುಕೊಳ್ಳುವವು ಎಂದು ಪ್ರದರ್ಶಿಸಿದ್ದಾನೆ. ಅನಂತರದಲ್ಲಿ ಎಂಬ ವೀಡಿಯೋವನ್ನು ಸಿದ್ಧಪಡಿಸಿದನು. ಹೋಲಿವುಡ್ ಮೂವ್ಹಿ ಮೇಕರ್ಸ್‌ಗೆ ದೊಡ್ಡ ಮೊತ್ತದ ಹಣ ಖರ್ಚಾದರೂ ಅವರ ಉದ್ದೇಶವು ದೇವರಲ್ಲಿ ನಂಬಿಕೆಯಿಡುವವರ ಮೇಲೆ ದಾಳಿ ಮಾಡುವುದಾಗಿದೆಯೆಂದು ಪುಸ್ತಕ ಮತ್ತು ವಿಡಿಯೋ ಎರಡರಲ್ಲಿಯೂ ಅವನು ಹೇಳಿದನು.

ಕೆಲವು ಸಲ ಕ್ರೈಸ್ತನ ಸ್ವಂತ ಮನೆಯಲ್ಲಿ ಹಿಂಸೆಯು ಬಹಳವಾಗಿ ತೀಕ್ಷ್ಣವಾಗಿರುತ್ತದೆ. ಗಂಡನಾಗಲೀ, ಇಲ್ಲವೇ ಹೆಂಡತಿಯಾಗಲೀ, ನಂಬುವ ಸಂಗತಿಯ ವಿಶ್ವಾಸವನ್ನು ಟೀಕಿಸಬಹುದು ಇಲ್ಲವೇ ತೃಣೀಕರಿಸಬಹುದು. ಈ ರೀತಿಯ ಹಿಂಸೆಯ ಸಹಿಸಲಿಕ್ಕೆ ಬಹಳವಾಗಿ ಕಠಿಣವಾದದ್ದಾಗಿರುತ್ತದೆ. ಮೊದಲನೆಯ ಶತಮಾನದ ಕ್ರೈಸ್ತರು ತಮ್ಮ ಕ್ರೈಸ್ತೇತರ ಸಂಗಾತಿಯೊಂದಿಗಿರಲು ಬೋಧಿಸಲ್ಪಟ್ಟಿದ್ದರೂ, ಕ್ರೈಸ್ತನು ಕ್ರೈಸ್ತೇತರಳನ್ನು ಮದುವೆಯಾಗುವಂಥದ್ದು ವಿಚಾರಮಾಡಲಿಕ್ಕಾಗದಂಥದ್ದಾಗಿದ್ದಕ್ಕೆ ಇದು ನಿಶ್ಚಯವಾಗಿಯೂ ಕಾರಣವಾಗಿದೆ (1 ಕೊರಿಂಥ 7:12-16, 39).

ಹಿಂಸೆಗೆ ತಾನೇ ಅಪರಿಚಿತನಲ್ಲದ ಪೌಲನು ರೋಮದಲ್ಲಿಯ ಸಭೆಗೆ ಹೀಗೆ ಬರೆದನು,

"ಸಾಧ್ಯವಾದರೆ, ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ" (ರೋಮಾಪುರ 12:18). ಈ ವಚನದ ಮೊದಲಿನ ಒಂಭತ್ತು ಪದಗಳು ಸಮಾಧಾನದಿಂದ ಇರುವುದು ಯಾವಾಗಲೂ ನಮ್ಮ ಬಲದೊಳಗೆ ಇರುವದಿಲ್ಲ ಎಂಬುದನ್ನು ಸೂಚಿಸುತ್ತವೆ. ಕೆಲವು ಸಲ ನಮ್ಮ ಆತ್ಮಿಕ ವಿರೋಧಿಗಳು ಸಂಗತಿಗಳು ವಿಶ್ರಾಂತಿಯಲ್ಲಿರುವದಕ್ಕೆ ಬಿಡುವದಿಲ್ಲ ಮತ್ತು ನಾವು ಹಿಂಸೆಯನ್ನು ಎದುರಿಸಬೇಕಾಗುತ್ತದೆ, ಇದರ ಬಗ್ಗೆ ನಾವು ಆಶ್ಚರ್ಯಪಡಬಾರದು, ಯೇಸುವಿನ ಶ್ರಮೆಯನ್ನು ಮತ್ತು ಆತನ ಎಚ್ಚರಿಕೆಯನ್ನು ಜ್ಞಾಪಿಸಿಕೊಂಡು, ಆತನನ್ನು ಅನುಸರಿಸಿ ನಾವು ಸಹ ಶ್ರಮೆಪಡಬೇಕು. ಆತನ ಮಾತುಗಳು ನಾವು ಎಡವಿಬೀಳದಂತೆ ನಮಗೆ ಆಶ್ರಯವಾಗಿವೆ!

## ವಿಷಯ ಎರಡು: ಯೇಸುವಿನಿಂದ ಬೇರ್ಪಡುವಿಕೆ (15:1-8)

ಅಂತ್ಯದಿಂದ ಪ್ರಾರಂಭಿಸುವದರಿಂದ ನಮ್ಮ ಪಠ್ಯಕ್ಕೆ ಅಸಾಮಾನ್ಯವಾದ ಮಾರ್ಗವನ್ನು ನಾವು ಸ್ಪಷ್ಟವಾಗಿ ತೆಗೆದುಕೊಂಡಿದ್ದೇವೆ. ಇದನ್ನು ಮಾಡಲಿಕ್ಕೆ ಕಾರಣವು ಯೇಸುವು ಈ ಮೊದಲು ನಮೂದಿಸಿದ ಸಂಬಂಧದ ಅವಸರವನ್ನು ಅರ್ಥಮಾಡಿಕೊಳ್ಳಕ್ಕಾಗುವಂತೆ ಹೇಳ ಲ್ಪಟ್ಟ ಸಮಸ್ಯೆಯನ್ನು ನೋಡುವದಾಗಿದೆ. ಇಲ್ಲದಿದ್ದರೆ, ಈ ಭಾಗವನ್ನು ಒಂದು ಆಸಕ್ತಿಯುಳ್ಳ ಆತ್ಮಿಕ ಪಾಠದಂತೆ ದೃಷ್ಟಿಸುವ ಉದ್ದೇಶ ಹೊಂದಬಹುದು ಆದರೆ ಅದು ಹಿಂಸೆಯ ಸಮಸ್ಯೆಯಿಂದ ಬೇರ್ಪಡಿಸಲ್ಪಟ್ಟಿರುತ್ತದೆ. ಅದರ ಪರಿಣಾಮವಾಗಿ ಈ ಅಧ್ಯಾಯದ ಅಂತ್ಯದಿಂದ ಪ್ರಾರಂಭಿಸಿದೆವು ಮತ್ತು ಈಗ ನಾವು ಪ್ರಾರಂಭಕ್ಕೆ ಸಿದ್ಧರಾಗಿದ್ದೇವೆ.

"ನಾನೇ ನಿಜವಾದ ದಾಕ್ಷೇ ಬಳ್ಳಿ. ನನ್ನ ತಂದೆ ತೋಟಗಾರನು" (15:1) ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಇದು ಯೋಹಾನನ ಸುವಾರ್ತೆಯಲ್ಲಿ ದಾಖಲೆಯಾದ "ನಾನು ಆಗಿದ್ದೇನೆ" ಎಂಬ ಏಳು ಹೇಳಿಕೆಗಳಲ್ಲಿ ಅಂತಿಮವಾದದ್ದಾಗಿದೆ. ದ್ರಾಕ್ಷೇ ಬಳ್ಳಿ ಮತ್ತು ಕೊಂಬೆಗಳು ತಂದೆ, ಕುಮಾರ ಮತ್ತು ಕುಮಾರನ ಶಿಷ್ಯರ ಮಧ್ಯದಲ್ಲಿಯ ಸಂಬಂಧಕ್ಕಾಗಿ ಒಂದು ರೂಪಕದಂತೆ ಕಾರ್ಯಮಾಡುತ್ತವೆ. ಯೇಸುವು ದಾಕ್ಷೇಬಳ್ಳಿ, ತಂದೆಯು ಒಕ್ಕಲಿಗನು (ಇಲ್ಲವೇ ತೋಟಗಾರನು, ಇಲ್ಲವೇ ದಾಕ್ಷೇ ತೋಟಗಾರನು), ಮತ್ತು ಶಿಷ್ಯರು ಕೊಂಬೆಗಳು. ಕೊಂಬೆಗಳು ಉತ್ಪಾದಿಸುವ ಫಲವು ಶಿಷ್ಯರ ಜೀವನಗಳಲ್ಲಿಯ ಭಕ್ತಿಯಾಗಿರುತ್ತದೆ.

ಈ ರೂಪಕದಲ್ಲಿ ಯೇಸುವಿನ, ಸಂದೇಶವು ದ್ರಾಕ್ಷೇ ಬಳ್ಳಿಯ ಮೇಲೆ ಬೆಳೆಯುವ ಕೊಂಬೆಯಂತೆ, ನಿಕಟವಾಗಿ ಉಳಿದುಕೊಂಡಿರುವ ಮಹತ್ವದ ಬಗ್ಗೆ ಕೇಂದ್ರೀಕರಿಸುತ್ತದೆ. ಹಾಗೆ ಮಾಡದೇ ಹೋಗುವಂಥದ್ದು ಬೇಗನೇ ಮರಣವನ್ನು ತರುತ್ತದೆ. ದ್ರಾಕ್ಷೆಬಳ್ಳಿಯಲ್ಲಿ ಉಳಿದು ಕೊಂಡಿರುವುದು ಫಲಿಸುವದಕ್ಕೆ ಒಂದೇ ಮಾರ್ಗವಾಗಿರುತ್ತದೆ. ಮತ್ತು ಫಲವನ್ನು ಉತ್ಪಾದಿಸದಿರುವುದು ಮರಣವನ್ನು ತರುತ್ತದೆ. ಫಲಕೊಡುದ ಕೊಂಬೆಗಳು ತೆಗೆದು ಹಾಕಲ್ಪಡುತ್ತವೆ ಮತ್ತು ದ್ರಾಕ್ಷೇ ತೋಟಗಾರನಿಂದ ಅವು ಸುಟ್ಟುಹಾಕಲ್ಪಡುತ್ತವೆ ಎಂದು ಯೇಸುವು ಸೂಚಿಸಿದನು (15:6). ದ್ರಾಕ್ಷೇ ತೋಟಗಾರನು ಫಲಕೊಡುವ ಕೊಂಬೆಗಳನ್ನು ಕಂಡುಕೊಂಡು, ಅವು ಹೆಚ್ಚು ಫಲಕೊಡುವ ಹಾಗೆ ಅವುಗಳನ್ನು ಶುದ್ಧಿ ಮಾಡುತ್ತಾನೆ ಎಂದೂ ಆತನು ಹೇಳಿದನು (15:2). ಈ ಅಧ್ಯಾಯದ ಪ್ರಾರಂಭದ ವಚನದಲ್ಲಿ, ಕುಡಿ ಕತ್ತರಿಸುವ ಚರ್ಚೆಯು ಯೇಸುವನ್ನು ಹಿಂಬಾಲಿಸುವುದು ಭವಿಷ್ಯದಲ್ಲಿ ಶಿಷ್ಯರಿಗೆ ನೋವಿನದಾಗಿರುವದೆಂಬುದು ಸೂಚಿಸಲ್ಪಟ್ಟಿದೆ.

ತನ್ನಲ್ಲಿ "ನೆಲೆಗೊಳ್ಳುವುದು" ಶಿಷ್ಯರಿಗೆ ಮಹತ್ವದ್ದಾಗಿದೆ ಎಂಬುದನ್ನು ಯೇಸುವು ಒತ್ತಿ ಹೇಳಿದನು ಏಳು ವಚನಗಳಲ್ಲಿ (15:1-7) "ನೆಲೆಗೊಂಡಿರು" ಎಂಬ ಪದವು ಏಳು ಸಲ ಯೇಸುವಿನ ತುಟಿಗಳ ಮೇಲೆ ಇರುತ್ತದೆ. ಅದರ ಅರ್ಥ, "ಮುಂದುವರಿ" ಇಲ್ಲವೇ "ಉಳಿದು ಕೊಂಡಿರು" ಎಂದಾಗುತ್ತದೆ. ಕೊಂಬೆಯು ತನ್ನ ಪೋಷಣೆಯನ್ನು ದ್ರಾಕ್ಷೇ ಬಳ್ಳಿಯಿಂದ ಹೊಂದಿಕೊಳ್ಳುವಂತೆ, ಶಿಷ್ಯರು ತಮ್ಮ ಜೀವನ ಪೋಷಣೆಯನ್ನು ಯೇಸುವಿನಿಂದ ಪಡೆದುಕೊಂಡರು. ಅಂಥ ಸಂದಿಗ್ಧ ಸಮಯದಲ್ಲಿ ಇದನ್ನು ಮರೆಯುವುದು ಅವರಿಗೆ ನಾಶನಕರವಾದದ್ದಾಗಿತ್ತು. ಕೊಂಬೆಗಳು ದಾಕ್ಷೇ

ಬಳ್ಳಿಯಿಂದ ಬೇರ್ಪಟ್ಟರೆ ಅವು ಸತ್ತು ಹೋಗುವವು ಮತ್ತು ದ್ರಾಕ್ಷೇ ಬಳ್ಳಿಯನ್ನು ಜೋಪಾನ ಮಾಡುವಾತನಿಂದ ಅವು ಸುಟ್ಟು ಹಾಕಲ್ಪಡುವವು.

ಮುಂದಿನ ಇಪ್ಪತ್ನಾಲು ಗಂಟೆಗಳಲ್ಲಿ ಶಿಷ್ಯರು ದೊಡ್ಡ ನೋವನ್ನು ಎದರಿಸುವರು. ಮತ್ತು ಅವರಿಗೆ ಹಲವಾರು ಆಯ್ಕೆಗಳಿದ್ದವು ಯೇಸುವಿನ ಅನುಯಾಯಿಗಳಂತೆ ನಾವೂ ಸಹ ವಿರೋಧಿಗಳನ್ನು ಮತ್ತು ದೈಹಿಕವಾದವುಗಳಲ್ಲದಿದ್ದರೂ ಆತ್ಮಿಕ ವೇದನೆಗಳನ್ನು ಎದುರಿಸಬೇಕಾಗುವುದು ಮತ್ತು ನಮಗೂ ಸಹ ಆಯ್ಕೆಗಳಿರುವವು.

ಯೇಸುವಿನ ನಿಮಿತ್ತವಾಗಿ ನಾವು ದ್ವೇಷಿಸುವಾಗ, ನಾವು ಬಿದ್ದು ಹೋಗ ಬಹುದು.

ಯೇಸುವಿನ ನಿಮಿತ್ತವಾಗಿ ನಾವು ದ್ವೇಷಿಸುವಾಗ, ನಾವು ಅಲ್ಲಗಳೆಯಲ್ಪಟ್ಟವರಂತೆ ಭಾವಿಸಬಹುದು.

ಯೇಸುವಿನ ನಿಮತ್ತವಾಗಿ ನಾವು ದ್ವೇಷಿಸಲ್ಪಡುವಾಗ, ನಾವು ನಮ್ಮ ಗುರುತುಗಳನ್ನು ಬದಲಾಯಿಸಬಹುದು.

ಯೇಸುವಿನ ನಿಮಿತ್ತವಾಗಿ ನಾವು ದ್ವೇಷಿಸಲ್ಪಡುವಾಗ, ನಾವು *ದ್ರಾಕ್ಷೇ ಬಳ್ಳಿಗೆ ಅಂಟಿಕೊಂಡಿರಬಹುದು!*

## ವಿಷಯ ಮೂರು: ಪ್ರೀತಿಯ ಅವಶ್ಯಕತೆ (15:9-17)

ದ್ರಾಕ್ಷೇ ಬಳ್ಳಿಯಲ್ಲಿ "ನೆಲೆಗೊಂಡಿರುವದಕ್ಕೆ" ಕೂಡಿಸಿ ಶಿಷ್ಯರು ಪ್ರೀತಿಯಲ್ಲಿ "ನೆಲೆಗೊಂಡಿರಲು" ಕರೆಯಲ್ಪಟ್ಟರು. ಪ್ರೀತಿಯು ಯೇಸುವಿನ ಹಿಂಬಾಲಕರಿಗೆ ದೊಡ್ಡ ಅವಶ್ಯಕತೆಯಾಗಿದೆ. ಈ ಮೊದಲು, ಶಿಷ್ಯರ ಪಾದಗಳನ್ನು ತೊಳೆಯುವದರಿಂದ, ಯೇಸುವು ತನ್ನ ಬೋಧನೆಗಳಲ್ಲಿ ಪ್ರೀತಿಯು ಹೇಗೆ ಮಹತ್ವದ್ದಾಗಿದೆಯೆಂಬುದನ್ನು ಪ್ರದರ್ಶಿಸಿದ್ದನು. ಆ ಸಂದರ್ಭದಲ್ಲಿ, ಆತನು ಹೀಗೆ ಹೇಳಿದ್ದನು,

> ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು (13:34, 35).

"ನಾನು ನಿಮ್ಮನ್ನು ಪ್ರೀತಿಸಿದಂತೆ, ನೀವು ಒಬ್ಬರನೊಬ್ಬರು ಪ್ರೀತಿಸಿರಿ" ಎಂಬ ಅಪ್ಪಣೆಯನ್ನು ಯೇಸುವು "ನನ್ನ ಆಜ್ಞೆ" ಎಂದು ಉಲ್ಲೇಖಿಸಿದನು (15:12). ದೇವರಿಗಾಗಿ ಮತ್ತು ಒಬ್ಬರೊಬ್ಬರಿಗಾಗಿ ಪ್ರೀತಿಯು ಸುವಾರ್ತೆ ಸಂದೇಶದ ಹೃದಯದಲ್ಲಿ ಇದೆ (ಮತ್ತಾಯ 22:34-40). ಯೋಹಾನನ ಸುವಾರ್ತೆಯಲ್ಲಿಯ ಈ ಭಾಗದಲ್ಲಿ ಪ್ರೀತಿಯ ಮೇಲೆ ಒತ್ತು ಕೊಡಲ್ಪಟ್ಟಿದೆ. ಸಿ. ಎಚ್. ದೊಡ್ಡ ಅವರು ಮೊದಲಿನ ಹನ್ನೆರಡು ಅಧ್ಯಾಯಗಳಲ್ಲಿ ಕೇವಲ ಆರು ಸಲ ಕಾಣುವದನ್ನು ಗಮನಿಸಿದರು ಮತ್ತು 13ರಿಂದ 17ನೆಯ ವರೆಗಿನ ಅಧ್ಯಾಯಗಳಲ್ಲಿ ಮೂವತ್ತೊಂದು ಸಲ ತೋರಿಸಿಕೊಳ್ಳುತ್ತದೆ.[2]

ಈ ವಾಕ್ಯಭಾಗದಲ್ಲಿ "ಪ್ರೀತಿ"ಯು ಭಾವನಾತ್ಮಕವಾದ ಅನಿಸುವಿಕೆಯಾಗಿರುವದಿಲ್ಲ. ಶಿಲುಬೆಯ ಮೇಲೆ ತನ್ನ ಮರಣದಲ್ಲಿ ಅತ್ಯುತ್ತಮವಾಗಿ ಕಂಡುಬರುವ ಪ್ರೀತಿಗೆ ತಾನು ಸಂಬಂಧಿಸಿ ಮಾತಾಡುತ್ತಿದ್ದೇನೆಂದು ಯೇಸುವು ಸ್ಪಷ್ಟಪಡಿಸಿದನು. "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ" (15:13) ಎಂದು ಆತನು ಹೇಳಿದಾಗ, ಅದರ ಅರ್ಥವೇನೆಂಬುದನ್ನು ಬಹುಶಃ ಶಿಷ್ಯರು ತಿಳಿದುಕೊಳ್ಳ ದಿದ್ದರೂ, ನಾನು ಮತ್ತು ನೀನು ಆತನು ನಿಶ್ಚಯವಾಗಿ ಮರುದಿನ ಸಂಭವಿಸಲಿಕ್ಕಿರುವ ತನ್ನ ಮರಣದ ಬಗ್ಗೆ ಮಾತಾಡುತ್ತಿರುವನೆಂಬುದನ್ನು ನಾವು ನೋಡುತ್ತೇವೆ. ಆತನ ಪ್ರೀತಿಯ ಉದಾಹರಣೆಯನ್ನು,

ಯೇಸುವನ್ನು ಶಿಲುಬೆಗೆ ನಡಿಸಿದ ಪ್ರೀತಿಯನ್ನು ಸಹ, ಆಗಿನಂತೆಯೇ, ಈಗಲೂ ಅನುಕರಿಸುವದಕ್ಕಾಗಿ ಆತನ ಶಿಷ್ಯರು ಕರೆಯಲ್ಪಟ್ಟಿದ್ದಾರೆ.

## ಮುಕ್ತಾಯ

ಆತನನ್ನು ಹಿಂಬಾಲಿಸುವ ಧೈರ್ಯ ಮಾಡುವವರೆಲ್ಲರಿಂದಲೂ ಹಿಂಸೆಯು ನಿರೀಕ್ಷಿಸಲ್ಪಟ್ಟಿದೆಯೆಂದು ಯೇಸುವು ನಮ್ಮನ್ನು ಎಚ್ಚರಿಸಿದ್ದಾನೆ, ಒಂದಿಲ್ಲಾ ಒಂದು ರೀತಿಯಲ್ಲಿ, ಎಲ್ಲಾ ಕ್ರೈಸ್ತರು ನಮ್ಮ ನಂಬಿಕೆಯ ಕಾರಣದಿಂದ ತೊಂದರೆಯನ್ನು ಎದುರಿಸುತ್ತಾರೆ. ಅದು ಸಂಭವಿಸುವಾಗ, ನಾವು ಏನು ಮಾಡಬೇಕು? ಯೇಸುವು ನಮಗೆ ಕೊಡುವ ಉತ್ತರಗಳು "ದ್ರಾಕ್ಷೇ ಬಳ್ಳಿಯಲ್ಲಿ ಉಳಿದುಕೊಳ್ಳುವುದು" ಮತ್ತು "ಒಬ್ಬರನ್ನೊಬ್ಬರು ಪ್ರೀತಿಸುವುದು."

ಆತನು ಈ ನಿರ್ದೇಶನಗಳನ್ನು ಕೊಟ್ಟು ಮರುದಿನ, ಜಗತ್ತು ಎಂದೂ ಕಾಣದ ರೀತಿಯಲ್ಲಿ ಪ್ರೀತಿಯ ಅತಿ ದೊಡ್ಡ ಪ್ರದರ್ಶನದಂತೆ ಯೇಸವು ಶಿಲುಬೆಗೆ ಹೋದನು. ಹೀಗಿದ್ದರೂ, ಆತನು ಪ್ರತಿಯಾಗಿ, ಪ್ರೀತಿಸಲ್ಪಡಲಿಲ್ಲ ಅದರ ಬದಲು, ಆತನು ಶಪಿಸಲ್ಪಟ್ಟನು, ಉಗುಳಲ್ಪಟ್ಟನು, ಹೊಡೆಯಲ್ಪಟ್ಟನು, ಅವಮಾನಿಸಲ್ಪಟ್ಟನು ಮತ್ತು ಕೊಲ್ಲಲ್ಪಟ್ಟನು. ಅದು ಜಗತ್ತು ನೋಡಿದ ಅತಿಯಾದ ಬುದ್ಧಿಹೀನ ದ್ವೇಷದ ಭಯಾನಕವಾದ ದೃಶ್ಯವಾಗಿತ್ತು. ಈ ಹುಚ್ಚುತನದಲ್ಲಿಯೂ ಸಹ, ಯೇಸುವು ನಂಬಿಗಸ್ತಿಕೆಯನ್ನೂ ಪ್ರೀತಿಯನ್ನೂ ಪ್ರದರ್ಶಿಸಿದನು. ಆತನು ಹಿಂಸೆಯನ್ನು ಎದುರಿಸಿದನು. ಮತ್ತು ಅದನ್ನು ಜಯಿಸುವ ಮಾರ್ಗವನ್ನು ನಮಗೆ ತೋರಿಸಿದನು.

ನಾನು ವಾಸಿಸುವಲ್ಲಿ ಅಸಾಮಾನ್ಯವಾಗಿ ಕೆಟ್ಟ ದಿನವಿರುವಾಗ ನಾವು ಉಪಯೋಗಿ ಸುವ ಒಂದು ಹೇಳಿಕೆಯಿದೆ. "ಇಂಥ ದಿನಗಳು ಇರುವವೆಂದು ನನ್ನ ತಾಯಿ ಯಾವಾಗಲೂ ಹೇಳು ತ್ತಿದ್ದಳು" ಎಂದು ನಾವು ಹೇಳುತ್ತೇವೆ. ಕ್ರಿಸ್ತನ ಹೆಸರನ್ನು ಧರಿಸುವ ಅವಕಾಶಕ್ಕಾಗಿ ಕಷ್ಟಕರ ವಾದ ಕ್ರಯ ಕೊಡಲು ನಾವು ಕರೆಯಲ್ಪಡುವಾಗ, ಅದೇ ರೀತಿಯಲ್ಲಿ ನಾವು, "ಇಂಥ ದಿನಗಳು ಇರುವವು ಎಂದು ಹೇಳಬಹುದು ಶ್ರಮೆಯು ಬರುವದೆಂದು ಆತನು ಹೇಳಿದ್ದು ಮಾತ್ರವಲ್ಲದೆ, ಅದು ಬರುವಾಗ ನಾವು ಏನು ಮಾಡಬೇಕೆಂದು ಸಹ ನಮಗೆ ತಿಳಿಸಿದನು: ದ್ರಾಕ್ಷೇ ಬಳ್ಳಿಗೆ ಅಂಟಿಕೊಂಡಿರ್ರಿ, ಮತ್ತು ಒಬ್ಬರನ್ನೊಬ್ಬರು ಪ್ರೀತಿಸಿರಿ!"

---

ಟಿಪ್ಪಣೆಗಳು

[1]ನೋಡಿರಿ. 9:22, 34, 35 ಸಭಾಮಂದಿರದಿಂದ ಹೊರಗೆ ಹಾಕುವಂಥದ್ದು ಆರಾಧನೆಯ ಮನೆಯಿಂದ ತಾತ್ಕಾಲಿಕವಾಗಿ ಹೊರಗೆ ಹಾಕುವದಕ್ಕಿಂತ ಹೆಚ್ಚಾದದ್ದಾಗಿತ್ತು. ಸಭಾಮಂದಿರವು ಸಮಾಜದ ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರವಾಗಿತ್ತು. ಒಬ್ಬನ ಕುಟುಂಬದಿಂದ ಮತ್ತು ಜನರಿಂದ ಬೇರ್ಪಡಿಸಲ್ಪಡುವಂಥದ್ದು ಯೇಸುವನ್ನು ಹಿಂಬಾಲಿಸಿದ್ದಕ್ಕಾಗಿ ಕೊಡಬೇಕಾಗಿದ್ದ ನೋವಿನ ಕ್ರಯವಾಗಿತ್ತು. [2]C. H. Dodd, *The Interpretation of the Fourth Gospel* (Cambridge: The University Press, 1958), 398.